ಲೋಕಧ್ವನಿ

# ಕನ್ನಡ ಪ್ರಬಂಧ ಸ್ಪರ್ಧಾ ವಿಜೇತರಿಗೆ ಪುರಸ್ಕಾರ



ಭವ್ಯಶ್ರೀ



ಶಕುಂತಲಾ



ಬಸವರಾಜ



ನಿಖಿತಾ

**ಹಳಿಯಾಳ:** 68ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಪಟ್ಟಣದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯದ ಕಲ್ಪವೃಕ್ಷ ಕನ್ನಡ ಸಂಘವು ದ್ವಿತೀಯ ಪಿಯುಸಿ ಹಾಗೂ ಡಿಪ್ಲೋಮಾ ಕೊನೆಯ ವರ್ಷದ ವಿದ್ಯಾರ್ಥಿಗಳಿಗೆ ಕನ್ನಡ ಪ್ರಬಂಧ ಸ್ಪರ್ಧೆಯನ್ನು ಆಯೋಜಿಸಿತ್ತು.

ಆನ್ಲೈನ್ ಮುಖಾಂತರ ನಡೆದ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ರಾಜ್ಯದ ಹಲವು ಕಾಲೇಜಿನ ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದರು. ತಂತ್ರಜ್ಞಾನದಲ್ಲಿ ಕನ್ನಡದ ಬಳಕೆ, ಕನ್ನಡ ತಂತ್ರಾಂಶಗಳು, ಕನ್ನಡ ಭಾಷೆಯನ್ನು ಉಳಿಸುವಲ್ಲಿ ಕನ್ನಡಿಗರ ಜವಾಬ್ದಾರಿ, ಕೈಗಾರಿಕೆ ಮತ್ತು ತಂತ್ರಜ್ಞಾನಕ್ಕೆ ಕನ್ನಡಿಗರ ಕೊಡುಗೆ, ಸಾವಯವ ಕೃಷಿ - ಬಳಕೆ ಮತ್ತು ಮಹತ್ವ ಎಂಬ ವಿಷಯಗಳ ಕುರಿತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು.

ಕುಮಟಾದ ನೆಲ್ಲಿಕೇರಿಯ ಹೆಚ್.ಬಿ.ಜಿ. ಪಿಯು ಕಾಲೇಜಿನ ಭವ್ಯಶ್ರೀ ನಾಯಕ್ ಪ್ರಥಮ, ಹಾವೇರಿಯ ಸಿ.ಬಿ. ಕೊಳ್ಳಿ ಪಾಲಿಟೆಕ್ನಿಕ್‌ನ ಶಕುಂತಲಾ ಎಚ್. ದ್ವಿತೀಯ, ಧಾರವಾಡದ ಕೆ.ಹೆಚ್. ಕಬ್ಬೂರ್ ಡಿಪ್ಲೋಮಾ ಕಾಲೇಜಿನ ಬಸವರಾಜ ಎನ್. ಮತ್ತು ಹಳಿಯಾಳದ ಕೆಎಲ್ಎಸ್ ಪಿಯು ಕಾಲೇಜಿನ ನಿಖಿತಾ ಎನ್. ತೃತೀಯ ಸ್ಥಾನ ಹಂಚಿಕೊಂಡರು. ಈ ಎಲ್ಲ ವಿಜೇತರನ್ನು ಮಹಾ ವಿದ್ಯಾಲಯ ದಲ್ಲಿ ಆಯೋಜಿಸಿರುವ ಕಾರ್ಯಕ್ರಮಕ್ಕೆ ಆಹ್ವಾನಿಸಿ ನಗದು ಪುರಸ್ಕಾರ ನೀಡಲಾಗುವುದು. ಮಹಾವಿದ್ಯಾಲಯದ ಇಕೋ (ಪರಿಸರ) ಕ್ಲಬ್, ಕಲ್ಪವೃಕ್ಷ ಕನ್ನಡ ಸಂಘ ಹಾಗೂ ಆವಿಷ್ಕಾರ ಪರಿಷತ್ತು, ಪರಿಸರ ಮಾಲಿನ್ಯ - ಪರಿಣಾಮ ಹಾಗೂ ಪರಿಹಾರ ಎಂಬ ವಿಷಯದ ಕುರಿತು ಪ್ರಬಂಧ ಸ್ಪರ್ಧೆಯನ್ನು ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಇತ್ತೀಚೆಗೆ ಏರ್ಪಡಿಸಿತ್ತು. ತನುಜಾ ಭಗವತ್ ಪ್ರಥಮ, ಕೀರ್ತಿ ಶೆಟ್ ದ್ವಿತೀಯ, ಅನಿತಾ ಹುಲಿಕೇರಿ ತೃತೀಯ ಸ್ಥಾನ ಪಡೆದುಕೊಂಡರು. ಈ ಕಾರ್ಯಕ್ರಮಗಳನ್ನು ಕನ್ನಡ ಕಲ್ಪವೃಕ್ಷ ಸಂಘದ ಸಂಚಾಲಕಿ ಪ್ರೊ. ರೋಹಿಣಿ ಕಲ್ಲೂರ್, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಇಕೋ ಕ್ಲಬ್ ಸಂಚಾಲಕಿ ಪ್ರೊ. ಲಕ್ಷ್ಮಿ ಹಟ್ಟಿ ಹೋಳಿ, ಪ್ರೊ. ನವೀನ್ ಹಿರೇಮಠ ಸಂಯೋಜಿಸಿದ್ದರು ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Main Edition
Dec 8, 2023 Page No. 3
Powered by : eReleGo.com


ಭವ್ಯಶ್ರೀ ನಾಯಕ್


ಶಕುಂತಲಾ ಎಚ್


ಬಸವರಾಜ ಎನ್


ನಿಖಿತಾ ಎನ್

# ಕನ್ನಡ ಪ್ರಬಂಧ ಸ್ಪರ್ಧೆ: ಸಾಧನೆ

**ಹಳಿಯಾಳ:** ಪಟ್ಟಣದ ಕೆ.ಎಲ್.ಎಸ್ ಸಂಸ್ಥೆಯ ವಿ.ಡಿ.ಐ.ಟಿ ಮಹಾವಿದ್ಯಾಲಯದ ಕಲ್ಪವೃಕ್ಷ ಕನ್ನಡ ಸಂಘವು 68ನೇ ಕನ್ನಡ ರಾಜ್ಯೋತ್ಸವ ನಿಮಿತ್ತ ದ್ವಿತೀಯ ಪಿಯುಸಿ ಮತ್ತು ಡಿಪ್ಲೋಮಾ ಕೊನೆಯ ವರ್ಷದ ವಿದ್ಯಾರ್ಥಿಗಳಿಗೆ ಆಯೋಜಿಸಿದ ಆನ್ ಲೈನ್ ಕನ್ನಡ ಪ್ರಬಂಧ ಸ್ಪರ್ಧೆಯಲ್ಲಿ ಕುಮಟಾದ ಭವ್ಯಶ್ರೀ ನಾಯಕ್ ಪ್ರಥಮ ಸ್ಥಾನವನ್ನು ಹಾಗೂ ಹಾವೇರಿಯ ಶಕುಂತಲಾ ಅವರು ದ್ವಿತೀಯ ಸ್ಥಾನ ಪಡೆದಿದ್ದಾರೆ.

ಕನ್ನಡದ ಬಳಕೆ, ಕನ್ನಡ ತಂತ್ರಾಂಶಗಳು, ಕನ್ನಡ ಭಾಷೆಯನ್ನು ಉಳಿಸುವಲ್ಲಿ ಕನ್ನಡಿಗರ ಜವಾಬ್ದಾರಿ, ಕೈಗಾರಿಕೆ ಮತ್ತು ತಂತ್ರಜ್ಞಾನಕ್ಕೆ ಕನ್ನಡಿಗರ ಕೊಡುಗೆ, ಸಾವಯವ ಕೃಷಿ–ಬಳಕೆ ಮತ್ತು ಮಹತ್ವ ಎಂಬ ವಿಷಯಗಳ ಬಗ್ಗೆ ನಡೆದ ಆನ್‌ಲೈನ್ ಪ್ರಬಂಧ ಸ್ಪರ್ಧೆಯಲ್ಲಿ ರಾಜ್ಯದ ಹಲವು ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಫಲಿತಾಂಶ: ಕುಮಟಾ ನೆಲ್ಲಿಕೇರಿಯ ಎಚ್.ಬಿ.ಜಿ.ಪಿಯು ಕಾಲೇಜಿನ ಭವ್ಯಶ್ರೀ ನಾಯಕ್ ಪ್ರಥಮ, ಹಾವೇರಿಯ ಸಿ.ಬಿಕೊಳ್ಳಿ ಪಾಲಿಟೆಕ್ನಿಕ್ ಕಾಲೇಜಿನ ಶಕುಂತಲಾ ಎಚ್. ದ್ವಿತೀಯ, ಧಾರವಾಡದ ಕೆ.ಎಚ್.ಕಬ್ಬೂರ ಡಿಪ್ಲೋಮಾ ಕಾಲೇಜಿನ ಬಸವರಾಜ ಎನ್, ಮತ್ತು ಹಳಿಯಾಳದ ಕೆ.ಎಲ್.ಎಸ್ ಪಿಯು ಕಾಲೇಜಿನ ನಿಖಿತಾ ಎನ್. ತೃತೀಯ ಸ್ಥಾನವನ್ನು ಪಡೆದಿದ್ದು ಎಲ್ಲಾ ಸ್ಪರ್ಧಾ ವಿಜೇತರಿಗೆ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗುವ ಕಾರ್ಯಕ್ರಮದಲ್ಲಿ ಆಹ್ವಾನಿಸಿ ಪುರಸ್ಕಾರ ನೀಡಿ ಗೌರವಿಸಲಾಗುವುದು ಎಂದು ಪ್ರಾಚಾರ್ಯ ಡಾ.ವಿ.ಎಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.